ಬಸವಕಲ್ಯಾಣ ಮತಕ್ಷೇತ್ರದಲ್ಲಿ ಮುಳುಗಡೆಯಾಗಿರುವ ಜಮೀನುಗಳಿಗೆ ಪರಿಹಾರ.

2385 (2909 ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸಣ್ಣ ಕೆರೆಗಳ ನಿರ್ಮಾಣ ಮಾಡುವ ಸಂದರ್ಭದಲ್ಲಿ ಜಮೀನಿನ ವಿಸ್ತೀರ್ಣ ಎಷ್ಟು ;

ಆ) ಮುಳುಗಡೆಯಾದ ಭೂಮಾಲೀಕರಿಗೆ ಕೊಡಬೇಕಾದ ಪರಿಹಾರ ಧನ ಮೊತ್ತವೆಷ್ಟು? ಈ ಪರಿಹಾರ ಧನ ನೀಡುವುದು ಎಷ್ಟು ವರ್ಷಗಳಿಂದ ಬಾಕಿ ಇದೆ ಹಾಗೂ ಯಾವಾಗ ಪರಿಹಾರಧನವನ್ನು ವಿತರಿಸಲಾಗುವುದು? (ಕೆರೆಗಳ ಹಾಗೂ ಗ್ರಾಮಗಳವಾರು ವಿವರ ಒದಗಿಸುವುದು)

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ಈ ಕ್ಷೇತ್ರದಲ್ಲಿ 10 ಕೆರೆಗಳು ಪೂರ್ಣಗೊಂಡಿದ್ದು ಒಟ್ಟು ಮುಳುಗಡೆ ಪ್ರದೇಶ 434.16 ಹೆಕ್ಟೇರ್.

ಆ) ಮೇಲೆ ತಿಳಿಸಿರುವ ಮತ್ತು ಕೆರೆಗಳಲ್ಲಿ 8 ಕೆರೆಗಳ ಕಾರ್ಯ 1980 ಇಸವಿಯ ಮುಂಚೆಯೆ ಪೂರ್ಣಗೊಂಡಿವೆ ಹಾಗೂ ಇವುಗಳಲ್ಲಿ ಸ್ವಾಧೀನಪಡಿಸಿಕೊಂಡ ಭೂಮಿಯ ಪರಿಹಾರ ಧನ ಸಣ್ಣ ನೀರಾವರಿ ಇಲಾಖೆ ಆಸ್ತಿತ್ವದಲ್ಲಿ ಬರುವ ಮುಂಚೆ ಎಂದರೆ 1983 ಇಸವಿಯ ಮೊದಲು ಪಾವತಿಸಲಾಗಿದೆ, ಉಳಿದ ಎರಡು ಕೆರೆಗಳು ಎಂದರೆ ಹೊನ್ನಳ್ಳಿ ಮತ್ತು ಸಿರ್ಗಾಪುರ ಗ್ರಾಮದ ಕೆರೆಗಳು 1998-99 ರಲ್ಲಿ ಜಿಲ್ಲಾ ಪಂಚಾಯತ್ ಇಂಜಿನೀಯರಿಂಗ್ ವಿಭಾಗದಿಂದ ವರ್ಷ 1992 ರಲ್ಲಿ ಪಾವತಿಸಲಾಗಿತ್ತು. ಸಣ್ಣ ನೀರಾವರಿ ವಿಭಾಗಕ್ಕೆ ಎರಡು ಕಾಮಗಾರಿಗಳು ವರ್ಗಾಯಿಸಿದ ನಂತರ ವ್ಯತ್ಯಾಸ ಹಣ ಕಟ್ಟಲಾಗಿದೆ. ಇದಲ್ಲದೆ ಅಲಗೂರ ಕೆರೆಯಲ್ಲಿ 1998 ರಲ್ಲಿ ಸ್ವಾಧೀನಪಡಿಸಿರುವ ಭೂಮಿಯ ಪರಿಹಾರ ಧನ ಕೂಡ ನ್ಯಾಯಾಲಯದ ಆದೇಶದಂತೆ ಹೆಚ್ಚುವರಿ ದರಗಳಲ್ಲಿ ಪಾವತಿಸಿದ ವಿವರ ಕೆಳಕಂಡಂತಿದೆ.

1) ಹೊನ್ನಳ್ಳಿ ಕೆರೆ ರೂ.2.52 ಲಕ್ಷ ನವೆಂಬರ್ 88ರಲ್ಲಿ ಪಾವತಿಸಲಾಗಿದೆ.
2) ಸಿರ್ಗಾಪೂರ ಕೆರೆ ರೂ.1.21. ಲಕ್ಷ ಮೇ. 99 ರಲ್ಲಿ ಪಾವತಿಸಲಾಗಿದೆ.
3) ಅಲಗೂರು ಕೆರೆ ರೂ.2.52 ಲಕ್ಷ ಮಾರ್ಚ್ 2001 ಪಾವತಿಸಲಾಗಿದೆ.

ಮೇಲಿನ ನ್ಯಾಯಾಲಯದ ಪ್ರಕರಣಗಳಲ್ಲಿ ಈ ಕೆಳಗಿನ ಎರಡು ಪ್ರಕರಣಗಳು ಬಾಕಿ ಇವೆ.

1) ಬಟ್ಟ ಬಾಳಕುಂದಾ ಕೆರೆ ರೂ.77168-00 ಜೂನ್ 97ರಿಂದ ಬಾಕಿ ಇದೆ.
2) ಸಿರ್ಗಾಪುರ ಕೆರೆ ರೂ.19512.00 ಫೆಬ್ರವರಿ 97 ರಿಂದ ಬಾಕಿ ಇದೆ.

ಪರಿಹಾರ ಧನವನ್ನು ಆದಷ್ಟು ಬೇಗ ಪಾವತಿಸಲಾಗುವುದು. ಹೊನ್ನಳ್ಳಿ ಕೆರೆಯಲ್ಲಿ ಹೊನ್ನಳ್ಳಿ ಮತ್ತು ಉಜಳಂಬ ಗ್ರಾಮಗಳ ಭೂಮಿಗಳು ಸೇರಿವೆ. ಸಿರ್ಗಾಪುರ ಕೆರೆಯಲ್ಲಿ ಸಿರ್ಗಾಪುರ ಮತ್ತು ಸರಜವಳಗಾ ಗ್ರಾಮಗಳ ಭೂಮಿ ಸೇರಿವೆ ಮತ್ತು ಅಲಗೂಡ ಕೆರೆಯಲ್ಲಿ ಕೇವಲ ಅಲಗೂಡ ಗ್ರಾಮದ ಭೂಮಿ ಸೇರಿದೆ.

ಬೀದರ್ ಜಿಲ್ಲೆಯಲ್ಲಿರುವ ಸಣ್ಣ ಕೆರೆಗಳ ಅಚ್ಚುಕಟ್ಟು ಪ್ರದೇಶ

2386 (2910) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಸಣ್ಣ ಕೆರೆಗಳ ಸಂಖ್ಯೆ ಎಷ್ಟು? ಅವುಗಳ ಅಚ್ಚುಕಟ್ಟು ಪ್ರದೇಶದ ವಿಸ್ತೀರ್ಣವೆಷ್ಟು? (ಕ್ಷೇತ್ರವಾರು ವಿವರ ನೀಡುವುದು)

ಆ) ಬಸವ ಕಲ್ಯಾಣ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ಸಣ್ಣ ಕೆರೆಗಳ ಸಂಖ್ಯೆ ಹಾಗೂ ಅಚ್ಚುಕಟ್ಟು ಪ್ರಮಾಣದ ವಿಸ್ತೀರ್ಣವೆಷ್ಟು, ನಿರ್ಮಾಣ ಮಾಡುವ ಗುರಿ ಎಷ್ಟು? ಹಾಲಿ ಬಳಕೆಯಲ್ಲಿರುವ ಅಚ್ಚುಕಟ್ಟು ಪ್ರದೇಶದ ಪ್ರಮಾಣ ಎಷ್ಟು? ಯೋಜನೆಯಲ್ಲಿರುವ ಅಚ್ಚುಕಟ್ಟು ಪ್ರಮಾಣವನ್ನು ಪೂರ್ಣವಾಗಿ ಬಳಕೆಯಲ್ಲಿ ತರಲು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ಸಣ್ಣ ನೀರಾವರಿ ವಿಭಾಗದ ವ್ಯಾಪ್ತಿಯಲ್ಲಿ 40 ಹೆಕ್ಟೇರ್ ಮತ್ತು ಮೇಲ್ಪಟ್ಟು ಅಚ್ಚುಕಟ್ಟು ಹೊಂದಿರುವ ಒಟ್ಟು 83 ಕೆರೆಗಳು ಅಸ್ತಿತ್ವದಲ್ಲಿವೆ. ಕ್ಷೇತ್ರವಾರು ವಿವರ ಕೆಳಗಿನಂತಿದೆ.

		ಕೆರೆಗಳು	ಅಚ್ಚುಕಟ್ಟು ಹೆಕ್ಟೇರುಗಳಲ್ಲಿ
1)	ಬೀದರ್	15	1362
2)	ಔರಾದ್	27	8041
3)	ಭಾಲ್ಕಿ	12	3113
4)	ಹುಮನಾಬಾದ್	15	2832
6)	ಹುಲಸೂರ	04	405
	ಒಟ್ಟು	83	17904